# ‘ಗೋಧ್ರ’ದಲ್ಲಿ ಅಲಮೇಲಮ್ಮ!



ಅಲಮೇಲಮ್ಮ ಚಿತ್ರಮಂದಿರಗಳಿಗೆ ಬರಲು ತಯಾರಾಗಿದ್ದಾಳೆ. ಇನ್ನಷ್ಟು ವಿಳಂಬ ಮಾಡದೆ, ಜೂನ್ ತಿಂಗಳಲ್ಲಿ ಅಲಮೇಲಮ್ಮನನ್ನು ಪ್ರೇಕ್ಷಕರಿಗೆ ಮುಖಾಮುಖಿ ಮಾಡಿಸುವ ಪ್ರಯತ್ನ ನಡೆದಿದೆ.

‘ಆಪರೇಷನ್ ಅಲಮೇಲಮ್ಮ’ ತನ್ನ ವಿಶಿಷ್ಟ ಶೀರ್ಷಿಕೆ ಹಾಗು ಟ್ರೈಲರ್‌ನಿಂದ ಚಿತ್ರರಸಿಕರ ಗಮನಸೆಳೆದಿರುವ ಸಿನಿಮಾ. ‘ಅನನ್ಯಾ ಟೀಚರ್’ ಪಾತ್ರದಲ್ಲಿ ಕಾಣಿಸಿಕೊಂಡಿರುವ ಶ್ರದ್ಧಾ ಶ್ರೀನಾಥ್ ಚಿತ್ರದ ನಾಯಕಿ. ಅಲಮೇಲಮ್ಮ ಯಾರು ಎನ್ನುವ ಬಗ್ಗೆ ನಿರ್ದೇಶಕರಾಗಲೀ ಶ್ರದ್ಧಾ ಅವರಾಗಲೀ ಗುಟ್ಟು ಬಿಟ್ಟುಕೊಟ್ಟಿಲ್ಲ. ಒಟ್ಟಿನಲ್ಲಿ ಅಲಮೇಲಮ್ಮನ ಅವತಾರ ಭಿನ್ನವಾಗಿರಲಿದೆ ಎನ್ನುವುದನ್ನು ಚಿತ್ರದ ಟ್ರೈಲರ್ ಸೂಚಿಸುವಂತಿವೆ. ಸಿಂಪಲ್ ಸುನಿ ನಿರ್ದೇಶನ ಕೂಡ ಸಿನಿಮಾದ ಬಗ್ಗೆ ಕುತೂಹಲ ಹೆಚ್ಚಲು ಕಾರಣವಾಗಿದೆ.

‘ಯು ಟರ್ನ್’, ‘ಉರ್ವಿ’ ಚಿತ್ರಗಳಂತೆ ಈ ಚಿತ್ರದಲ್ಲೂ ಶ್ರದ್ಧಾ ಅವರ ಪಾತ್ರ ವಿಶಿಷ್ಟವಾಗಿದೆ. ಸೀರೆ ಉಟ್ಟುಕೊಂಡು ಪ್ರಬುದ್ಧಳಂತೆ ಕಾಣಿಸುವ ಈ ಟೀಚರ್, ಅಂತರಂಗದಲ್ಲಿ ಆಧುನಿಕ ಉಡುಪುಗಳನ್ನು ಧರಿಸಿ ಸುತ್ತಾಡುವ ಕನಸು ಹೊಂದಿರುವವಳು. ತನ್ನ ಆಸೆಗಳನ್ನು ಅದುಮಿಟ್ಟುಕೊಂಡು ಬದುಕುವ ಯುವತಿ ವಿಚಿತ್ರ ಪ್ರಕರಣವೊಂದರಲ್ಲಿ ಸಿಲುಕಿಕೊಳ್ಳುವ ಕುತೂಹಲಕರ ಕಥೆ ಚಿತ್ರದ್ದು. ಸುನಿ ಅವರ ಹಿಂದಿನ ಸಿನಿಮಾಗಳಂತೆ ತಮಾಷೆ, ನವಿರು ನಿರೂಪಣೆ ಚಿತ್ರದಲ್ಲಿದೆಯಂತೆ.

ಒಂದುಕಡೆ, ಅಲಮೇಲಮ್ಮನ ಬಿಡುಗಡೆಗೆ ತಯಾರಿ ನಡೆಯುತ್ತಿದ್ದರೆ, ಇನ್ನೊಂದೆಡೆ ಶ್ರದ್ಧಾ ಅವರ ಹೊಸ ಚಿತ್ರವೊಂದು ಸೆಟ್ಟೇರುವ ಪ್ರಯತ್ನದಲ್ಲಿದೆ. ‘ಗೋಧ್ರ’ ಎನ್ನುವ ಹೊಸ ಚಿತ್ರವನ್ನು ಅವರು ಒಪ್ಪಿಕೊಂಡಿದ್ದಾರೆ. ಕೆ.ಎಸ್. ನಂದೀಶ್ ಅವರ ಚೊಚ್ಚಲ ನಿರ್ದೇಶನದ ಈ ಸಿನಿಮಾದಲ್ಲಿ ನೀನಾಸಂ ಸತೀಶ್ ನಾಯಕರಾಗಿ ಅಭಿನಯಿಸುತ್ತಿದ್ದಾರೆ. ಪ್ರಸ್ತುತ ಶ್ರದ್ಧಾ ಅವರು ತೆಲುಗು ಚಿತ್ರವೊಂದರಲ್ಲಿ ನಟಿಸುತ್ತಿದ್ದು, ಆ ಚಿತ್ರ ಮುಗಿದ ನಂತರ ‘ಗೋಧ್ರ’ ಶೂಟಿಂಗ್ ಆರಂಭಗೊಳ್ಳಲಿದೆ.

# ಪ್ರಚಂಡ ಪುಟಾಣಿಗಳು

‘ಡ್ರಾಮಾ ಜೂನಿಯರ್ಸ್’ ಕಿರುತೆರೆಯ ಜನಪ್ರಿಯ ರಿಯಾಲಿಟಿ ಷೋಗಳಲ್ಲೊಂದು. ಮುದ್ದು ಮಕ್ಕಳ ಪ್ರತಿಭೆಯನ್ನು ಅನಾವರಣಗೊಳಿಸಿದ್ದ ಈ ಕಾರ್ಯಕ್ರಮ, ಚಿಣ್ಣರ ಮೂಲಕ ಹಲವು ಸಾಮಾಜಿಕ ಸಮಸ್ಯೆಗಳಿಗೆ ಕನ್ನಡಿ ಹಿಡಿಯುವ ಅರ್ಥಪೂರ್ಣ ಕೆಲಸ ಮಾಡಿತ್ತು. ಈಗ ಆ ಮಕ್ಕಳು ಬೆಳ್ಳಿತೆರೆಗೆ ಲಗ್ಗೆ ಇಟ್ಟಿದ್ದಾರೆ. ‘ಎಳೆಯರು ನಾವು ಗೆಳೆಯರು’ ಚಿತ್ರದ ಹೆಸರು.

ಪ್ರಚಂಡ ಪುಟಾಣಿಗಳಾದ ಅಚಿಂತ್ಯ, ನಿಹಾಲ್, ಅಭಿಷೇಕ್, ಅಮೋಘ್, ತುಷಾರ್, ಪುಟ್ಟರಾಜು, ಮಹೇಂದ್ರ, ಸೂರಜ್, ತೇಜಸ್ವಿನಿ, ಮಹತಿ ಅವರೊಂದಿಗೆ ಶಂಕರ್ ಅಶ್ವತ್ಥ್, ಕೆ.ಎಸ್. ಪರಮೇಶ್ವರ್, ಹರಿಣಿ ಮುಂತಾದ ಹಿರಿಯರೂ ತಾರಾಗಣದಲ್ಲಿದ್ದಾರೆ.

‘ಡ್ರಾಮಾ ಜೂನಿಯರ್ಸ್’ ಮಕ್ಕಳ ಸಿನಿಮಾಕ್ಕೆ ನಾಗರಾಜ್ ಗೋಪಾಲ್ ಬಂಡವಾಳ ಹೂಡಿದ್ದಾರೆ. ರಿಯಾಲಿಟಿ ಷೋನಲ್ಲಿ ಮಕ್ಕಳ ಪ್ರತಿಭೆಯನ್ನು ತಿದ್ದಿತೀಡಿದವರಲ್ಲಿ ಒಬ್ಬರಾಗಿದ್ದ ವಿಕ್ರಂ ಸೂರಿ ಚಿತ್ರದ ನಿರ್ದೇಶಕರು. ಅನೂಪ್ ಸೀಳಿನ್ ಸಂಗೀತ ಹಾಗೂ ಅಶೋಕ್ ವಿ. ರಾಮನ್ ಛಾಯಾಗ್ರಹಣ ಚಿತ್ರಕ್ಕಿದೆ. ‘ಎಳೆಯರು ನಾವು ಗೆಳೆಯರು’ ಚಿತ್ರದ ಪ್ರಥಮ ಪ್ರತಿ ಸಿದ್ಧವಾಗಿದ್ದು, ಸದ್ಯದಲ್ಲೇ ಚಿತ್ರವನ್ನು ತೆರೆಕಾಣಿಸುವ ಪ್ರಯತ್ನದಲ್ಲಿ ನಿರ್ಮಾಪಕರು ತೊಡಗಿಕೊಂಡಿದ್ದಾರೆ.

‘ಎಳೆಯರು ನಾವು ಗೆಳೆಯರು’ ಮಕ್ಕಳ ಚಿತ್ರವಾದರೂ ಅದಕ್ಕೆ ‘ಮಕ್ಕಳ ಸಿನಿಮಾ’ ಎನ್ನುವ ಹಣೆಪಟ್ಟಿ ಹಚ್ಚುವುದು ನಿರ್ಮಾಪಕ–ನಿರ್ದೇಶಕರಿಗೆ ಇಷ್ಟವಿಲ್ಲ. ‘ಇದೊಂದು ಅಪ್ಪಟ ಕಮರ್ಷಿಯಲ್ ಸಿನಿಮಾ’ ಎನ್ನುವ ಅವರ ಮಾತಿನಲ್ಲಿ, ಚಿತ್ರವನ್ನು ಹೆಚ್ಚು ಜನರಿಗೆ ತಲುಪಿಸುವ ಇಂಗಿತವಿದೆ.

